ಇ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ವಿವಿಧ ಬಾಬ್ತಿಗಾಗಿ ಮಂಜೂರಾದ ಹಣವೆಷ್ಟು ಹಾಗೂ ವಿತರಿಸಿದ ಹಣವೆಷ್ಟು ಮತ್ತು ಇನ್ನೂ ಕೊಡಬೇಕಾದ ಹಣ ಎಷ್ಟು?

ಶ್ರೀ ಕೆ.ಪಿಜ್. ರಂಗನಾಥ್ (ಲೋಕೋಪಯೋಗಿ ಸಚಿವರು): ಅ) ತುಮಕೂರು ಜಿಲ್ಲೆಯ ಲೋಕೋಪಯೋಗಿ ವಿಭಾಗದ ಕಾಮಗಾರಿಗಳಿಗೆ ವಿವಿಧ ಶೀರ್ಷಿಕೆಯಡಿ 1993-94ನೇ ಸಾಲಿಗೆ ಒದಗಿಸಿರುವ ಅನುದಾನ ಮತ್ತು 2:94ರವರೆಗೆ ಮಾಡಿರುವ ಖರ್ಚಿನ ವಿವರ ಈ ಕೆಳಕಂಡಂತಿದೆ

(ಲಕ್ಷಗಳಲ್ಲಿ)

ತಾಲ್ಲೂಕು	ಅನುದಾನ	ಖರ್ಚು
ತುಮಕೂರು	923.625	63.93
ಗುಬ್ಬಿ	"	37.31
ಕುಣಿಗಲ್	"	19.89
ತುರುವೇಕೆರೆ	"	23.86
ತಿಪಟೂರು	"	21.63
ಚಿಕ್ಕನಾಯಕನಪಳ್ಳಿ	"	15.99
ಶಿರಾ	"	33.04
ಕೊರಟಗೆರೆ	"	15.20
ಮಧುಗಿರಿ	"	67.39
ಪಾವಗಡ	"	14.11
ಒಟ್ಟು	923.625	312.35

ಆ) ಕೆಲವು ಸಾಮಗ್ರಿಗಳನ್ನು ಖರೀದಿಸಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು ವಿಷಯಗಳನ್ನು ಪರಿಶೀಲಿಸಲಾಗುತ್ತಿದೆ.

ಇ) ಪರಿಶೀಲಿಸಿದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಕಳ್ಳಂಬೆಳ್ಳ ಕ್ಷೇತ್ರಕ್ಕೆ ಅಭಿವೃದ್ಧಿ ಕಾಮಗಾರಿಗಳಿಗೆ 1993-94ನೇ ಸಾಲಿಗೆ ವಿವಿಧ ಶೀರ್ಷಿಕೆಯಡಿಯಲ್ಲಿ 91.274 ಲಕ್ಷ ರೂ.ಗಳ ಅನುದಾನ ಲಭ್ಯವಿದ್ದು ಇಲ್ಲಿಯವರೆಗೆ 47.236 ಲಕ್ಷ ರೂ.ಗಳ ಪ್ರಗತಿ ಸಾಧಿಸಿ 16.319 ಲಕ್ಷ ರೂ.ಗಳ ಖರ್ಚು ಮಾಡಿದ್ದು ಇನ್ನೂ 39.92 ಲಕ್ಷ ರೂ.ಗಳನ್ನು ಪಾವತಿ ಮಾಡಬೇಕಾಗಿದೆ.

ಹೈಡ್ರೋ ಇಲೆಕ್ಟ್ರಿಕ್ ಉತ್ಪಾದನೆಗಾಗಿ ಯೋಜಿಸಿರುವ ಯೋಜನೆಗಳ ವಿವರ ಕುರಿತು

653 - ಶ್ರೀ ಮಲ್ಲಾರಿ ಗೌಡ. ಎಸ್. ಪಾಟೀಲ (ಸಂಕೇಶ್ವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೇಕೆದಾಟು, ಆಲಮಟ್ಟಿ ನಾರಾಯಣಪುರ ಶಿವನಸಮುದ್ರಂ ಮತ್ತು ಗೋಕಾದ ಎಡದಂಡೆ ಭಾಗಗಳಲ್ಲಿ ಹೊಸ ವಿದ್ಯುತ್ ಘಟಕ ಹಾಗೂ ಇನ್ನೂ ಹೆಚ್ಚು ಅವಕಾಶವಿರುವ ವಿದ್ಯುತ್ ಉತ್ಪಾದನಾ ಘಟಕದ ಪ್ರಾರಂಭಕ್ಕಾಗಿ ಸರ್ಕಾರದ ಕಾರ್ಯಕ್ರಮ ಏನು?

ಆ) ವಿದ್ಯುತ್ ಉತ್ಪಾದನೆಗಾಗಿ ಅಣುಸ್ಥಾವರ ಹಾಗೂ ಥರ್ಮಲ್ ಪವರ್ ಸ್ಟೇಶನ್ನನ ನಿರ್ಮಾಣಕ್ಕಾಗಿ ಪರರಾಷ್ಟ್ರದಿಂದ ಕರ್ನಾಟಕ ಸರ್ಕಾರಕ್ಕೆ ವಿನಂತಿ ಮಾಡಿರುವ ಕಂಪನಿಗಳ ಹೆಸರುಗಳೇನು?

ಇ) 1992-93 ಮತ್ತು 1993-94ರಲ್ಲಿ ಹೊಸ ವಿದ್ಯುತ್ ಉತ್ಪಾದನೆ ಪ್ರಾರಂಭ ಮಾಡಿರುವ ಘಟಕಗಳ ವಿವರ (ಪ್ರಶ್ನೆಯನ್ನು ಕೈಬಿಡಲಾಯಿತು)

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಉ) ಅಲ್ಲಮಟ್ಟಿ, ನಾರಾಯಣಪುರ ಮತ್ತು ತುಮಕೂರಿನಲ್ಲಿ 660 ಮೆ. ವ್ಯಾಟ್ ವಿದ್ಯುತ್ ಯೋಜನೆಯನ್ನು ಅಭಿವೃದ್ಧಿಪಡಿಸಲು ಮೆ. ವಿಜಿಯೊ ಪವರ್ ಕಂಪನಿ, ಯು.ಎಸ್.ಎ. ಸಂಸ್ಥೆಯೊಂದಿಗೆ ತಿಳುವಳಿಕಾ ಜ್ಞಾಪನಾಪತ್ರಕ್ಕೆ ಈಗಾಗಲೇ ಸಹಿ ಹಾಕಲಾಗಿದೆ.

ದೂಪದಲ್ ಯೋಜನೆಯನ್ನು (ಬಿಗ್ ಫೈವ್ ಮೆ. ವ್ಯಾಟ್) ಗ್ಯೋಕ್ಯಾಕ್ ಮೊಲ್ಡವರಿಗೆ ಕ್ಯಾಪ್ಟಿವ್ ವಿದ್ಯುತ್ ಉತ್ಪಾದಿಸಲು ಗುತ್ತಿಗೆ ನೀಡಲಾಗಿದೆ. ಶಿವನಸಮುದ್ರ ಮತ್ತು ಮೇಕೆದಾಟು ಯೋಜನೆಗಳನ್ನು ಕಾವೇರಿ ಜಲವಿವಾದ ಇತ್ಯರ್ಥದ ನಂತರ ತೆಗೆದುಕೊಳ್ಳಲಾಗುವುದು.

ಮೇಲಿನ ಯೋಜನೆಗಳಲ್ಲದೇ ಮಹದಾಯಿ, ಬೇಡ್ತಿ, ಅಘನಾಶಿನಿ ಮತ್ತು ನೇತ್ರಾವತಿ ನದಿಕೊಳ್ಳಗಳಲ್ಲಿ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಉದ್ದೇಶವಿದೆ.

ಊ) ಈ ಕೆಳಗಿನ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಪರಿಶೀಲನೆಯ ವಿವಿಧ ಹಂತದಲ್ಲಿದ್ದು ಸಂಬಂಧಪಟ್ಟವರೊಂದಿಗೆ ತಿಳುವಳಿಕಾ ಜ್ಞಾಪನಾ ಪತ್ರಕ್ಕೆ ಸಹಿ ಹಾಕಲಾಗಿದೆ.

1) ಮಂಗಳೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ : ಘಟಕ ಸಾಮರ್ಥ್ಯ 1000 ಮೆ. ವ್ಯಾಟ್ ಕೊಜೆರ್ಬ್ರಿಕ್ಸ್ ಇಂಡಿಯಾ ಲಿಮಿಟೆಡ್

2) ಹೊಸಪೇಟೆ ಶಾಖೋತ್ಪನ್ನ ವಿದ್ಯುತ್ ಕೇಂದ್ರ : ಘಟಕ ಸಾಮರ್ಥ್ಯ 500 ಮೆ. ವ್ಯಾಟ್ : ಪ್ರಾಕ್ ಇಂಡಸ್ಟ್ರೀಸ್ ನ್ಯಾಷನಲ್ ಯು.ಎಸ್.ಎ ಸಂಸ್ಥೆ

3) ರಾಯಚೂರು ವಿದ್ಯುತ್ ಕೇಂದ್ರ, ಫೇಸ್-III ಘಟಕ ಸಾಮರ್ಥ್ಯ 500 ಮೆ. ವ್ಯಾಟ್. ಮೆ: ಪಬ್ಲಿಕ್ ಪವರ್ ಇಂಟರ್‌ನ್ಯಾಷನಲ್, ಯು.ಎಸ್.ಎ

ರಾಜ್ಯ ಸರ್ಕಾರವು ಈ ಸ್ಥಾವರಗಳಲ್ಲಿ ವಿದ್ಯುತ್ ಖರೀದಿಯ ವಿವಿಧ ಹಂತಗಳ ಯಾವ ಸಂಸ್ಥೆಯೊಂದಿಗೂ ತಿಳುವಳಿಕೆ ಒಪ್ಪಂದಕ್ಕೆ ಸಹಿ ಮಾಡಿಕೊಂಡಿರುವುದಿಲ್ಲ.

ಋ) 1992-93ನೇ ಸಾಲಿನಲ್ಲಿ ಈ ಕೆಳಕಂಡ ವಿದ್ಯುತ್ ಉತ್ಪಾದನಾ ಕೇಂದ್ರಗಳು ಉತ್ಪಾದನೆಯನ್ನು ಪ್ರಾರಂಭಿಸಿವೆ.

ಶರಾವತಿ ವಿದ್ಯುದಾಗಾರದ	ವಿದ್ಯುತ್ ಘಟಕ	4 x 27.6 ಮೆಗಾವ್ಯಾಟ್
ಘಟಕ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ		
ಮಾಣಿ (ಪ್ಯಾಕ್) ವಿದ್ಯುದಾಗಾರ		4 x 4.5 ಮೆಗಾವ್ಯಾಟ್
ಘಟಪ್ರಭಾ ವಿದ್ಯುದಾಗಾರ		2 x 16 ಮೆಗಾವ್ಯಾಟ್
ಡೀಸಲ್ ವಿದ್ಯುತ್ ಘಟಕ(ರಾಯಚೂರು)		2 x 21.32 = 42.64 ಮೆಗಾವ್ಯಾಟ್
ಶಿವಪುರ ವಿದ್ಯುದಾಗಾರ		2 x 9 = 18 ಮೆಗಾವ್ಯಾಟ್

1993-94ರಲ್ಲಿ ಈ ಕೆಳಕಂಡ ಹೊಸ ವಿದ್ಯುತ್ ಉತ್ಪಾದನಾ ಕೇಂದ್ರಗಳು ಉತ್ಪಾದನೆಯನ್ನು ಪ್ರಾರಂಭಿಸಿವೆ.

ಮಾಣಿ ಡ್ಯಾಂ ವಿದ್ಯುದಾಗಾರ		1 x 4.5 = 4.5 ಮೆಗಾವ್ಯಾಟ್
ಗುಡೇಕಲ್ ವಿದ್ಯುದಾಗಾರ		1 x 0.35 = 0.35 ಮೆಗಾವ್ಯಾಟ್
		1 x 4.5 = 4.5 ಮೆಗಾವ್ಯಾಟ್

ಶರಾವತಿ ವಿದ್ಯುದಾಗಾರದ ವಿದ್ಯುತ್ ಘಟಕ ಸಾಮರ್ಥ್ಯವನ್ನು ಪೆಟ್ಟಿಸಲಾಗಿದೆ	1	14.4	14.4 ಮೆ.ವ್ಯಾಟ್
ಡೀಸಲ್ ವಿದ್ಯುತ್ ಘಟಕ(ಯಲಹಂಕಾ)	4	21.32	85.28 ಮೆ.ವ್ಯಾಟ್

ಮಂಡ್ಯ ವಿಭಾಗ ಮಂಡ್ಯ ಇಲ್ಲಿಗೆ ಅನುದಾನ ಬಿಡುಗಡೆಯಾಗದಿರುವ ಬಗ್ಗೆ

575 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ವಿಭಾಗ, ಮಂಡ್ಯಕ್ಕೆ ಅನುದಾನ (ಎಲ್‌ಒಸಿ) ಬಿಡುಗಡೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಅನುದಾನ ಬಿಡುಗಡೆ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಇ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೆ ವಿರಿಸಲಾಗಿದೆ ಯಾವುದೆ (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಪ್ರತ್ಯೇಕ ಮಾಹಿತಿ ನೀಡುವುದು)

ಶ್ರೀ ಕೆ.ಪಿಚ್. ರಂಗನಾಥ್ (ಲೋಕೋಪಯೋಗಿ ಸಚಿವರು): [illegible]

ಅ) ಸರ್ಕಾರದಿಂದ ಹಣ ಭರವಸೆ ಪತ್ರ ಬಿಡುಗಡೆಯಾದ ಪ್ರಮಾಣದಲ್ಲಿ ಧಾಮಾಷ ಮಂಡ್ಯ ವಿಭಾಗಕ್ಕೂ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನ ಫೆಬ್ರವರಿ 94ರವರೆವಿಗೆ 310.96 ಲಕ್ಷ ರೂ.ಗಳ ವೆಚ್ಚವನ್ನು ಮಾಡಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) 426.90 ಕಿಮೀ

ಕ್ಷೇತ್ರ	ಕಿ.ಮೀ
1) ಕೆರಗೋಡು	50.00
2) ಮದ್ದೂರು	50.00
3) ಮಳವಳ್ಳಿ	48.70
4) ಕಿರುಗಾವಲ್	49.20
5) ನಾಗಮಂಗಲ	50.00
6) ಕೆ.ಆರ್. ಪೇಟೆ	50.00
7) ಶ್ರೀರಂಗಪಟ್ಟಣ	48.00
8) ಪಾಂಡವಪುರ	51.50
9) ಮಂಡ್ಯ	29.50

ಉಡುಪಿ ತಾಲ್ಲೂಕಿನಲ್ಲಿ ವಿದ್ಯುತ್ ಸೌಲಭ್ಯವನ್ನು ಕೆಲವು ಸ್ಥಳಗಳಿಗೆ ಕಲ್ಪಿಸುವ ಬಗ್ಗೆ

593 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಹೆಬ್ರಿ ಗ್ರಾಮದಲ್ಲಿ ಸಂಪೂರ್ಣ ವಿರಳವಾಗಿ 41ನೇ ವಿರೂರು ಗ್ರಾಮದ (ಕಾವಾಡಿ, ನೇಮಟ್ಟು, ಅಂಬಿದೆ ಬ್ಯಾಗ್ಯಾರು) ಸ್ಥಳಗಳಲ್ಲಿ ಈವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದು ನಿಜವೇ?